೧೧–೩೦ ಎ. ಎಂ.

ಶ್ರೀ ಜೆ. ಹೆಚ್. ಪಟೇಲ್.—ಸನ್ಮಾನ್ಯ ಸದಸ್ಯರಿಗೆ ಸುಸ್ತು ಇಷ್ಟೇ ಹೇಳಿದೆ. ಎಲ್ಲಾ ಕಾರ್ಖಾನೆಗಳಿಗೂ ಒಂದು ಆದೇಶ ಏನು ಕೊಟ್ಟಿದ್ದೇವೆ ಎಂದರೆ ೨೦೫ ರೂಪಾಯಿಗಳು ಪಾರ್ ಲೆವಿ ರೆಕವರಿ ಇದು ಸ್ಟೇಟ್ ಅಡ್ವೈಸರಿ ಪ್ರೈಸ್. ಇದಕ್ಕಿಂತಲೂ ಕಡಿಮೆ ಯಾರೂ ಕೊಡುವ ಹಾಗೆ ಇಲ್ಲ. ಅವರು ಜಾಸ್ತಿ ಕೊಡುವುದು ಇದ್ದರೆ ಕೊಡಬಹುದು ಕೇನ್ ಪ್ರೈಸ್ ಎಂದು ಕೊಡಬೇಡಿ ಟ್ರಾನ್ಸ್ ಪೋರ್ಟ್ ಬೋನಸ್ ಎಂದು ಕೊಡಿ ಎಂದು ಹೇಳಿದ್ದೇವೆಯೇ ಹೊರತು. ರೈತರಿಗೆ ಹೆಚ್ಚಿನ ದರ ಕೊಡಬೇಡಿ ಎಂದು ಹೇಳುವ ಸರ್ಕಾರ ಇದು ಅಲ್ಲ ಎಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ನಿಮ್ಮ ಆರ್ಡರ್ ನೋಡಿದರೆ ಹೆಚ್ಚಿಗೆ ಕೊಡಬೇಡಿ ಎಂದು ಹೇಳುವ ಹಾಗೆ ಇತ್ತು.

ಶ್ರೀ ಜೆ. ಹೆಚ್. ಪಟೇಲ್.—ಕಾರ್ಖಾನೆಗಳನ್ನು ಉಳಿಸುವುದಕ್ಕೆ ಸರ್ಕಾರಿ ವಲಯದಲ್ಲಿ ಇರಲಿ, ಜಂಟ್, ವಲಯದಲ್ಲಿ ಇರಲಿ ಖಾಸಗಿ ವಲಯದಲ್ಲಿ ಇರಲಿ ಆ ಕಾರ್ಖಾನೆಗಳನ್ನು ಮುಚ್ಚುವ ರೀತಿಯಲ್ಲಿ ಯಾವುದಕ್ಕೂ ಈ ಸರ್ಕಾರ ನೀತಿಯನ್ನು ರೂಪಿಸಿಲ್ಲ. ಕಾರ್ಖಾನೆಗಳು ಉಳಿಯಬೇಕು ರೈತನಿಗೆ ಹೆಚ್ಚಿಗೆ ಕೊಡುವಂಥ ವ್ಯವಸ್ಥೆ ಯಾಗಬೇಕು ಈ ಎರಡನ್ನೂ ಮಾಡಿದ್ದೇವೆ ರಾಜ್ಯದಲ್ಲಿ ಮೊದಲಿನಿಂದಲೂ ನಡೆದುಕೊಂಡು ಬಂದಂತೆ ಇವೊತ್ತಿಗೂ ಕೇನ್ ಪ್ರೈಸ್ ಎಷ್ಟು ಎಂದು ಮೊದಲೇ ಫಿಕ್ಸ್ ಮಾಡಿರುವುದರಿಂದ ಬೇರೆ ಕಡೆ ಆಪರವರಿಗೆ ಬೇಕಾದ ಹಾಗೆ ಇನ್‌ಸೆಂಟೀವ್ ಕೊಡುತ್ತಾರೆ ತೀರಾ ಪೈಪೋಟಿ ಇದ್ದುದು ತಪ್ಪಿ ಈಗಒಳ್ಳೆಯ ವಾತಾವರಣ ಇದೆ.

ಅಧ್ಯಕ್ಷರು.—ಪ್ರಶ್ನೆ ಕೇಳಿದ ಸದಸ್ಯರು ಗೈರು ಹಾಜರು

ಹಾಲು ಉತ್ಪಾದಕರ ಸಹಕಾರಿ ಸಂಘ.

೫೭೮. ಶ್ರೀ ರಮೇಶ್ ಕುಮಾರ್ (ಶ್ರೀನಿವಾಸಪುರ)*—ಮಾನ್ಯ ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೂನ್ ೧೯೮೭ರ ಅಂತ್ಯಕ್ಕೆ ರಾಜ್ಯದಲ್ಲಿ ನೊಂದಾಯಿಸಲ್ಪಟ್ಟ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು?

ಆ) ಜೂನ್ ೧೯೮೦ರ ಅಂತ್ಯಕ್ಕೆ ನೊಂದಾಯಿಸಲ್ಪಟ್ಟ ಇಂತಹ ಸಂಘಗಳ ಸಂಖ್ಯೆಯೆಷ್ಟು?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

ಅ) ೪೦೨೮ (ನಾನೂರ ಇಪ್ಪತ್ತೆಂಟು) ಸಂಘಗಳು ನೊಂದಾಯಿಸಲ್ಪಟ್ಟಿವೆ.

ಆ) ೧೧೪೬ (ಒಂದು ಸಾವಿರದ ನೂರ ನಲವತ್ತಾರು) ಸಂಘಗಳು ನೊಂದಾಯಿಸಲ್ಪಟ್ಟಿವೆ.

ಶ್ರೀ ರಮೇಶ್‌ಕುಮಾರ್.—ಕಳೆದ ೭ ವರ್ಷಗಳಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಇದರ ಅರ್ಧ ಹಾಲು ಉತ್ಪಾದನೆಯೂ ಸಹ ರಾಜ್ಯದಲ್ಲಿ ಅಷ್ಟರಮಟ್ಟಿಗೆ ಹೆಚ್ಚಾಗಿರುತ್ತದೆ. ಇದನ್ನು ನೋಡಿದಾಗ ಜಾನುವಾರು ಸಂಖ್ಯೆಯೂ ಕೂಡ ಹೆಚ್ಚಾಗಿದೆ. ವಿಶೇಷವಾಗಿ ಹೆಚ್ಚು ಹಾಲನ್ನು ಕೊಡತಕ್ಕ ಮಿಶ್ರ ತಳಿ ಜಾನುವಾರುಗಳು ಹೆಚ್ಚಾಗಿದ್ದರೆ ಕಳೆದ ೭ ವರ್ಷಗಳಲ್ಲಿ ಜಾಸ್ತಿಯಾಗಿರುವ ಸಂಖ್ಯೆ ಎಷ್ಟು ? ಹಾಗೆಯೇ ಕಳೆದ ೭ ವರ್ಷಗಳಲ್ಲಿ ಎಷ್ಟು ಹಾಲಿನ ಉತ್ಪಾದನೆ ಜಾಸ್ತಿಯಾಗಿದೆ? ಈ ಬಗ್ಗೆ ಮಾನ್ಯ ಮಂತ್ರಿಗಳು ಅಂಕಿಅಂಶಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ.—ಜಾನುವಾರುಗಳಲ್ಲಿ ವಿಶ್ರುತಳಿಗಳು ನಮ್ಮಲ್ಲಿ ಮೇಲ್ದರ್ಜೆಗೆ ವರ್ಗಾವಣೆ ಎಷ್ಟು ಹೆಚ್ಚಾಗಿವೆ ಎನ್ನುವ ಮಾಹಿತಿ ನನ್ನಲ್ಲಿ ಇಲ್ಲ. ಆದರೆ ಹಾಲಿನ ಉತ್ಪಾದನೆಯಲ್ಲಿ ಎಷ್ಟು ಹೆಚ್ಚಳವಾಗಿದೆ ಎನ್ನುವ ಮಾಹಿತಿಯನ್ನು ಕೊಡಲಿಕ್ಕೆ ಸಾಧ್ಯ ಸುಗ್ಗಿಯ ಕಾಲದಲ್ಲಿ ಹಾಲಿನ ಉತ್ಪಾದನೆ ಒಂದು ದಿವಸಕ್ಕೆ ೧೧ಲಕ್ಷದ ೩೫ಸಾವಿರ ಲೀಟರ್ ಕರ್ನಾಟಕ ರಾಜ್ಯದಲ್ಲಿ ಆಗುವಂತಾದ್ದು ಇದೆ ಹಾಲಿನ

ಉತ್ಪನ್ನ ಆಗಿರತಕ್ಕ ಹಸುಗಳಿಗೆ ಕೃತಕ ಗರ್ಭಧಾನಣೆ ಮಾಡುತ್ತಿರುವುದರಿಂದ ಮತ್ತೆ ಬೇರೆ ಕಡೆಯಿಂದ ಮಿಶ್ರತಳಿಗಳು ಬರುತ್ತಿರುವುದರಿಂದ ಹಾಲಿನ ಉತ್ಪನ್ನ ಜಾಸ್ತಿಯಾಗುತ್ತಿದೆ, ಕರ್ನಾಟಕ ರಾಜ್ಯದಲ್ಲಿ ೨೫ ಸಾವಿರ ಲಕ್ಷ ಲೀಟರ್ ಹಾಲು ಉತ್ಪನ್ನ ಮಾಡತಕ್ಕ ಸಾಮರ್ಥ್ಯ ಇದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ರಮೇಶ್‌ಕುಮಾರ್.—ಇಷ್ಟು ಹಾಲು ಹೆಚ್ಚು ಉತ್ಪತ್ತಿ ಆಗಬೇಕಾಗಿದ್ದರೆ ಮಿಶ್ರ ತಳಿಗಳ ಸಂಖ್ಯೆ ಇಷ್ಟು ಇಲ್ಲದೇ ಇದ್ದರೂ ಜಾನುವಾರುಗಳ ಸಂಖ್ಯೆ ಕಳೆದ ೭ ವರ್ಷಗಳಲ್ಲಿ ಜಾಸ್ತಿ ಆಗಿರಲೇ ಬೇಕು. ಯಾವ ರೈತ ಇವುಗಳನ್ನು ನಂಬಿ ಜೀವನ ನಡೆಸುತ್ತಿದ್ದಾನೆ, ಅವನ ಪಶುಗಳಿಗೆ ವೈದ್ಯಕೀಯ ಚಿಕಿತ್ಸೆಕೊಡತಕ್ಕ ವಿಷಯದಲ್ಲಿ ಜಾನುವಾರುಗಳ ಸಂಖ್ಯೆ ಎಷ್ಟು ಹೆಚ್ಚು ಪರಿಯಾಗಿದೆ ಅದಕ್ಕೆ ಅನುಗುಣವಾಗಿ ವೈದ್ಯಕೀಯ ಸೌಲಭ್ಯ ಕಲ್ಪಿಸಿಕೊಡತಕ್ಕ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆಯೇ?

ಶ್ರೀ ಸಿದ್ದರಾಮಯ್ಯ.—ಹಾಲಿನ ಉತ್ಪನ್ನ ಹೆಚ್ಚಾಗುವುದಕ್ಕೂ ಜಾನುವಾರುಗಳ ಸಂಖ್ಯೆ ಹೆಚ್ಚಾಗುವುದಕ್ಕೂ ಸಂಬಂಧ ಇಲ್ಲ. ಜಾನುವಾರು ಸಂಖ್ಯೆ ಹೆಚ್ಚಾಗಿದೆ. ಹಾಲಿನ ಪ್ರಮಾಣ ಜಾಸ್ತಿಯಾಗಿಲ್ಲ ಎಂದು ತಾವು ಹೇಳಿದ್ದೀರಿ, ಅದು ಹಾಗೆ ಅಲ್ಲ. ನಮ್ಮಲ್ಲಿ ಮೊದಲು ಅರ್ಧ ಲೀಟರ್ ಮುಕ್ಕಾಲು ಲೀಟರ್ ಕೊಡತಕ್ಕ ಹಸುಗಳನ್ನು ವಿಶ್ರತಳಿ ಮಾಡಿರುವುದರಿಂದ ೫ಲೀಟರ್ ಹಾಲು ಕೊಡತಕ್ಕ ಹಸುಗಳು ೧೦ ಲೀಟರ್ ಹಾಲು ಕೊಡುತ್ತಿವೆ. ಹಾಲಿನ ಉತ್ಪನ್ನಕ್ಕೆ ಜಾನುವಾರುಗಳ ಸಂಖ್ಯೆಯೇ ಜಾಸ್ತಿಯಾಗಬೇಕಾಗಿಲ್ಲ ಊಟಿ ಮತ್ತು ಬೇರೆ ಬೇರೆ ರಾಜ್ಯಗಳಿಂದ ವಿಶ್ರತಳಿಗಳು ಬಂದು ಸ್ವಲ್ಪ ಸುಟ್ಟಿಗೆ ಹಾಲಿನ ಉತ್ಪನ್ನ ಜಾಸ್ತಿಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಇನ್ನೂ ಹೆಚ್ಚಿಗೆ ಹಾಲು ಕೊಡತಕ್ಕ ರಾಸುಗಳ ಅಭಿವೃದ್ಧಿ ಮಾಡಲು ಒಳ್ಳೆಯತಳಿಯ ಹೋರಿಗಳ ವೀರ್ಯವನ್ನು ಹಸುಗಳಿಗೆ ಕೊಡತಕ್ಕ ವ್ಯಾಪಕ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ ಇದರಿಂದ ಇನ್ನೂ ಹೆಚ್ಚು ಹಾಲು ಉತ್ಪಾದನೆ ಆಗವ ಸಾಧ್ಯತೆ ಇದೆ. ತಾವು ಹೇಳುವಂತೆ ಪಶು ವೈದ್ಯಕೀಯ ಸೌಲಭ್ಯ ಸಾಕಷ್ಟಿಲ್ಲ ಎಂಬುದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಇದಕ್ಕಾಗಿ ನಾವು ಏನು ಮಾಡಿದ್ದೇವೆಂದರೆ ಹಾಲು ಉತ್ಪಾದನಾ ಸಹಕಾರ ಸಂಘಗಳನ್ನು ನಾವು ಎಲ್ಲೆಲ್ಲಿ ಸ್ಥಾಪನೆ ಮಾಡಿದ್ದೇವೆ ಅಲ್ಲೆಲ್ಲಾ ಪಶು ವೈದ್ಯರು ವಾರಕ್ಕೆ ೨ ಸಾರಿ ಭೇಟಿನೀಡಿ ಪಶು ವೈದ್ಯಕೀಯ ಸೌಲಭ್ಯವನ್ನು ಒದಗಿಸಬೇಕೆಂದು ಮಾಡಿದ್ದೇವೆ. ಈ ರೀತಿ ಮಾಡಿದರೂ ಪಶುವೈದ್ಯಕೀಯ ಸೌಲಭ್ಯ ಸಮರ್ಪಕವಾಗಿ ಸಿಕ್ಕುತ್ತದೆಂಬುದರಲ್ಲಿ ನಮಗೆ ಸ್ವಲ್ಪಮಟ್ಟಿನ ಸಂಶಯ ಇದೆ ಇದನ್ನು ಸಮರ್ಪಕವಾಗಿ ಮಾಡಬೇಕಾದರೆ ಕರ್ನಾಟದಲ್ಲಿರತಕ್ಕ ಜಾನುವಾರುಗಳ ಸಂಖ್ಯೆಗೆ ಅನುಗುಣವಾಗಿ ಲೆಕ್ಕಹಾಕಿದರೆ ೮೦೦ ಪಶುವೈದ್ಯ ಶಾಲೆಗಳನ್ನು ನಾವು ಕೊಡಬೇಕಾಗುತ್ತದೆ. ೭೫೦೦ ಪಶು ವೈದ್ಯಕೀಯ ಸಣ್ಣ ಘಟಕಗಳನ್ನು ತೆರೆಯಬೇಕೆಂದು ಮಾತಾಡಿತ್ತಿದ್ದೇವೆ. ಈಗ ರಾಜ್ಯದಲ್ಲಿ ೧೨೩ ಪಶು ವೈದ್ಯಕೀಯ ಶಾಲೆಗಳಿವೆ. ಇದರ ಜೊತೆಗೆ ಇನ್ನೂ ೮೦೦ ಪಶುವೈದ್ಯ ಶಾಲೆಗಳನ್ನು ನಾವು ತೆರೆಯಬೇಕಾಗಿದೆ ಇದುವರೆಗೆ ಪಶು ಪರೀಕ್ಷಕರು (ಲೈವ್ ಸ್ಟಾಕ್ ಇನ್‌ಸ್ಪೆಕ್ಟರ್ಸ್) ಔಷಧಿ ವಿಶ್ರಣಕಾರರು ಇರಲಿಲ್ಲ. ವೈದ್ಯರು ಇರಲಿಲ್ಲ. ಈಗ ನಾವು ಕರ್ನಾಟಕದಲ್ಲಿರತಕ್ಕ ಎಲ್ಲಾ ಪಶುವೈದ್ಯ ಶಾಲೆಗಳಿಗೂ ಔಷಧಿ ವಿಶ್ರಣಕಾರರನ್ನು ಪಶು ಪರೀಕ್ಷಕರನ್ನೂ, ಮತ್ತು ವೈದ್ಯರನ್ನೂ ನೇಮಕ ಮಾಡತಕ್ಕ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಹಾಲು ಉತ್ಪಾದಕರಿಗೆ ಮತ್ತು ಪಶುಗಳನ್ನು ಸಾಕಿರುವವರಿಗೆ ತುಂಬಾ ಅನುಕೂಲಗಳನ್ನು ಮಾಡಿಕೊಡುತ್ತಿದ್ದೀರಿ. ನಿಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದು ೫ ವರ್ಷಗಳಾಯಿತು. ಇಷ್ಟು ದಿವಸಗಳಾದರೂ ಖಾಲಿ ಇರತಕ್ಕ ಹುದ್ದೆಗಳನ್ನು ತುಂಬುವುದಕ್ಕೆ ಆಗಿರಲಿಲ್ಲವೆ? ಸಿಬ್ಬಂದಿವರ್ಗ ಸಿಕ್ಕತ್ತಿಲ್ಲವೆಂದು ತಾವು ಹೇಳುತ್ತಿದ್ದೀರಿ. ಹಾಗಾದರೆ ಈ ಸಮಸ್ಯೆ ಬಗೆಹರಿಯುವುದಿಲ್ಲವೆಂದು ಅನಿಸುತ್ತದೆ. ಪಶುವೈದ್ಯಶಾಲೆ ದೃಷ್ಟಿಯಿಂದ, ಮತ್ತು ಆಸ್ಪತ್ರೆಯ ದೃಷ್ಟಿಯಿಂದ ತಾವು ಏನು ಕಾರ್ಯ ಕ್ರಮವನ್ನು ಹಾಕಿಕೊಂಡಿದ್ದೀರಿ?

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೆ, ನಾನು ಉತ್ತರವನ್ನು ಕೊಟ್ಟಾಗ ಮಾನ್ಯ ಸದಸ್ಯರು ಇರಲಿಲ್ಲವೆಂದು ಕಾಣಿಸುತ್ತದೆ. ಆಗಲೇ ನಾನು ಹೇಳಿದೆ. ಈಗ ನಮಗೆ ಸಿಬ್ಬಂದಿ ಕೊರತೆ ಇಲ್ಲ. ೧೯೮೩ರಲ್ಲಿ ನಾವು ಅಧಿಕಾರಕ್ಕೆ ಬಂದಾಗ ಸಿಬ್ಬಂದಿಯ ಕೊರತೆ ಇತ್ತು. ಔಷಧಿ ವಿಶ್ರಣಕಾರರ

ಕೊರತೆ ಇತ್ತು. ಅವರಿಗೆ ತರಬೇತಿಯನ್ನು ಕೊಡುತ್ತಿದ್ದೇವೆ. ಪಶು ಪರೀಕ್ಷಕರ ಕೊರತೆ ಇತ್ತು. ಈಗ ಅವರಿಗೂ ತರಬೇತಿಯನ್ನು ಕೊಡುತ್ತಿದ್ದೇವೆ. ಪಶು ವೈದ್ಯರ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದೇವೆ. ನವಗೆ ತಾಂತ್ರಿಕ ಸಿಬ್ಬಂದಿಯ ಕೊರತೆ ಇದೆಯೆಂದು ನಾನು ಹೇಳುತ್ತಿಲ್ಲ. ಹೊಸದಾಗಿ ಇನ್ನೂ ೮೦೦ ಪಶುವೈದ್ಯಕೀಯ ಶಾಲೆಗಳನ್ನು ತೆರೆಯಬೇಕೆಂದು ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನೀವು ಹೊಸದಾಗಿ ಆಸ್ಪತ್ರೆಗಳನ್ನು ತೆರೆಯಬೇಕೆಂದಿದ್ದೀರಿ, ಆಸ್ಪತ್ರೆ ಕಟ್ಟಡಗಳನ್ನು ಕಟ್ಟಿಸಬೇಕಾಗುತ್ತದೆ. ಅದಕ್ಕೆ ಬೇಕಾದ ಎಲ್ಲಾ ಸಿಬ್ಬಂದಿಯನ್ನೂ ನೇಮಕ ಮಾಡ ಬೇಕಾಗುತ್ತದೆ. ಆದರೆ ಇದೆಲ್ಲಕ್ಕೂ ಅವಶ್ಯಕವಾಗಿ ಬೇಕಾದ ದುಡ್ಡಿನ ಕೊರತೆ ಇದೆ. ಇದಕ್ಕೇನು ಮಾಡುತ್ತೀರಿ ?

ಶ್ರೀ ಸಿದ್ದರಾಮಯ್ಯ.— ಜಿಲ್ಲಾ ಪರಿಷತ್ತಿಗೆ ನಾವು ಈ ಅಧಿಕಾರವನ್ನು ವರ್ಗಾವಣೆ ಮಾಡಿದ್ದೇವೆ. ತಾವೂ ಕೂಡ ಈ ಬಗ್ಗೆ ಮಸೂದೆಯನ್ನು ಪಾಸ್ ಮಾಡುವಾಗ ಒಪ್ಪಿಕೊಂಡಿದ್ದೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ನಿಮ್ಮ ಜಿಲ್ಲಾ ಪರಿಷತ್ತಿನವರು ಆಸ್ಪತ್ರೆಯ ಕಟ್ಟಡಗಳನ್ನು ಕಟ್ಟಿಸುತ್ತಾರೆ, ಜಾನುವಾರುಗಳನ್ನು ರೈತರು ನೋಡಿಕೊಳ್ಳುತ್ತಾರೆ. ನಿಮ್ಮ ಅಧಿಕಾರವನ್ನೆಲ್ಲಾ ಜಿಲ್ಲಾ ಪರಿಷತ್ತುಗಳಿಗೆ ಕೊಟ್ಟಿದ್ದೀರಿ. ನಿಮಗೆ ಇನ್ನೇನು ಕೆಲಸ ಇದೆ ? ನೀವು ಇಲ್ಲಿ ಏತಕ್ಕೆ ಇದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.— ನೀವು ಇಲ್ಲಿ ಪ್ರಶ್ನೆ ಕೇಳಿದರೆ ಯಾರು ಉತ್ತರವನ್ನು ಕೊಡುತ್ತಾರೆ ? ನಿಮಗೆ ಉತ್ತರ ಕೊಡುವುದಕ್ಕಾದರೂ ನಾವು ಇರಬೇಕಲ್ಲ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ ಹೋದ ಸಾರಿ ಹಾಲು ಸರಬರಾಜು ಬಗ್ಗೆ ಹಾಲಿಡೆ ಡಿಕ್ಲೇರ್ ಮಾಡಿದ್ದೀರಿ. ಮತ್ತೆ ಇಷ್ಟೇ ಹಾಲನ್ನು ಕೊಳ್ಳುವುದು ಎಂದು ಒಂದು ವಿನಿಯನ್ನೂ ಕೂಡ ಹಾಕಿದ್ದೀರಿ. ಈ ವಿನಿಯನ್ನು ತೆಗೆದು ಹಾಲು ಎಷ್ಟು ಬಂದರೂ ಅಷ್ಟನ್ನು ತೆಗೆದುಕೊಳ್ಳುವಂತೆ ಆರ್ಡರ್‌ನ್ನು ಮಾಡುತ್ತೀರಾ ? ರೈತರು ಅವರವರೇ ಹಾಲನ್ನು ಸಂಸ್ಕರಿಸಬೇಕು ಎಂದು ಹೇಳುತ್ತೀರಿ, ರೈತರು ಸಂಸ್ಕರಿಸುವ ಬಗೆ ಹೇಗೆ ? ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಸೊಸೈಟಿಗಳಿಂದ ಸರಬರಾಜು ಮಾಡತಕ್ಕಂಥ ಹಾಲಿಗೆ ವಿನಿ ೧೫೦೦ ಲೀಟರ್ ಎಂದು ಹೇಳಿರುತ್ತೀರಿ. ಜಾಸ್ತಿ ಬಂದರೆ ತೆಗೆದುಕೊಳ್ಳುವುದಿಲ್ಲ. ಇದನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ.— ಮಾನ್ಯ ವೆಂಕಟರಾಮಯ್ಯನವರು ಇದರ ಬಗ್ಗೆ ಪೂರ್ಣವಾದ ಮಾಹಿತಿಯನ್ನು ತಿಳಿದುಕೊಂಡಿಲ್ಲವೆಂದು ಕಾಣುತ್ತದೆ, ಕಳೆದ ವರ್ಷ ನಾವು ರಜವನ್ನು ಘೋಷಿಸಿದ್ದೆವು. ಈ ವರ್ಷ ಸಂವೃದ್ಧಿಯಾದ ಕಾಲದಲ್ಲಿ ಒಂದೇ ಒಂದು ದಿವಸವೂ ಕೂಡ ರಜವನ್ನು ಘೋಷಿಸಿಲಿಲ್ಲ. ಎರಡನೆಯದಾಗಿ ಸರಬರಾಜಿಗೆ ವಿನಿಗೊಳಿಸಿದ್ದಾರೆಂದು ಹೇಳಿದರು ನಾವು ಅದಕ್ಕೆ ವಿನಿಗೊಳಿಸಿಲ್ಲ, ಸಮೃದ್ಧಿ ಕಾಲದಲ್ಲಿ ಹೆಚ್ಚಾಗುತ್ತದೆ ಎಂದು ಸೂಚನೆ ಕೊಟ್ಟಿದ್ದು ನಿಜ. ಹಳ್ಳಿಗಾಡಿನ ಸಹಕಾರಿ ಸಂಘಗಳ ಮೂಲಕ ಬರತಕ್ಕ ಹಾಲನ್ನು ಇಷ್ಟೇ ಕೊಂಡುಕೊಳ್ಳಬೇಕೆಂದು ವಿನಿಯನ್ನು ಯಾವ ಸಂದರ್ಭದಲ್ಲೂ ಮಾಡಿಲ್ಲ. ನಮ್ಮಲ್ಲಿ ಸಂಸ್ಕರಣ ಸಾಮರ್ಥ್ಯವಿಲ್ಲವೆಂದು ಹೇಳಲಿಲ್ಲ. ಬೇರೆ ಬೇರೆ ರಾಜ್ಯಗಳಿಂದ ಬರತಕ್ಕಂಥ ಹಾಲನ್ನೂ ಕೂಡ ಸಂಸ್ಕರಣ ಮಾಡಿ ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಕೂಡ ಮಾಡಿದ್ದೇವೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಾನ್ಯ ಅಧ್ಯಕ್ಷರೇ ಕಳೆದ ಎರಡು ವರ್ಷಗಳಲ್ಲಿ ಒಂದು ನೀತಿಯನ್ನು ಅನುಸರಿಸುತ್ತಿದ್ದೀರಿ. ಹಳ್ಳಿ ಹಳ್ಳಿಗಳಲ್ಲೂ ಹಾಲ್ಕೋಹಾಲ್ ಬಾರ್‌ಗಳು ಜಾಸ್ತಿಯಾಗುತ್ತಿದೆ. ಇದರ ಬದಲಾಗಿ ಹಾಲಿನ ಡೈರಿಗಳನ್ನು ತೆಗೆಯುವ ವ್ಯವಸ್ಥೆಯನ್ನು ಮಾಡಿ ಎಂದು ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ.— ಮಾನ್ಯ ಅಧ್ಯಕ್ಷರೇ ಎಲ್ಲೆಲ್ಲಿ ಹಾಲಿನ ವ್ಯಾಪಾರವಾಗುತ್ತದೆ. ಅಲ್ಲಿ ಹಾಲಿನ ಮಾರಾಟ ಕೇಂದ್ರಗಳನ್ನು ತೆಗೆಯುವುದು ಮೂಲಭೂತವಾಗಿ ಇರುವ ಉದ್ದೇಶ. ಮತ್ತೆ ಹಾಲು ಉತ್ಪಾದನಾ ಸಹಕಾರಿ ಸಂಘಗಳನ್ನು ರಚನೆ ಮಾಡಿರುವುದು ಎಲ್ಲಿ ಹಾಲು ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕುತ್ತದೆ ಅಲ್ಲಿ ಸಿಕ್ಕುತಕ್ಕಂಥ ಹಾಲನ್ನು ಶೇಖರಣೆ ಮಾಡಿ ಪಟ್ಟಣ ಪ್ರದೇಶಗಳಿಗೆ ಮಾರಾಟ ಮಾಡಬೇಕು ಎನ್ನುವುದೇ ನಮ್ಮ ಉದ್ದೇಶವಾಗಿದೆ. ಹಾಗೆಯೇ ತಾಲ್ಲೂಕು ಕೇಂದ್ರಗಳಲ್ಲೂ ಮಿಲ್ಕ್ ಪಾರಮ್ಗಳನ್ನು ತೆಗೆದು ಹಾಲನ್ನು ಮಾರಾಟ ಮಾಡಲು ಒಪ್ಪಿಕೊಂಡಿದ್ದೇವೆ. ಮಾನ್ಯ

ಸದಸ್ಯರಾದ ಬಾಬುರೆಡ್ಡಿಯವರು ಹೇಳಿದ ಹಾಗೆ ಎಲ್ಲಿ ಹಾಲನ್ನು ಮಾರಾಟ ಮಾಡಲು ಹೇಳಿದರೆ ಅಲ್ಲಿ ಹಾಲಿನ ಕೇಂದ್ರವನ್ನು ತೆಗೆದು ಮಾರಾಟ ಮಾಡಲು ಏರ್ಪಾಡು ಮಾಡುತ್ತೇವೆ.

ಶ್ರೀ ಸಿ. ಎಂ. ಉದಾಸಿ.— ಮಾನ್ಯ ಸಚಿವರು ಎಲ್ಲಾ ಪಶು ತಪಾಸಣೆಗಾಗಿ ಡಾಕ್ಟರುಗಳನ್ನು ಊರು ಊರುಗಳಿಗೆ ಮತ್ತು ಎಲ್ಲೆಲ್ಲಿ ಸಹಕಾರಿ ಸಂಘಗಳಿರುತ್ತವೆ ಅಲ್ಲಿಗೆ ಕಳುಹಿಸಿಕೊಡುತ್ತೇವೆಂದು ಹೇಳಿದ್ದರು. ಪಶ್ಚಿಮ ಭಾಗದಲ್ಲಿ ಡಾಕ್ಟರುಗಳು ದೊರಕುತ್ತಿಲ್ಲ. ರೈತರಿಗೆ ಬಹಳ ತೊಂದರೆ ಯಾಗುತ್ತಿದೆ. ಕೇವಲ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಈ ವ್ಯವಸ್ಥೆ ಇರುತ್ತದೆ ಎಂದು ಸಂಶಯ ಮಾಡಲಿಕ್ಕೆ ಕಾರಣವಾಗಿದೆ. ನಮ್ಮ ಭಾಗಕ್ಕೂ ಡಾಕ್ಟರುಗಳು ಬರಲು ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ.— ಆಪರೇಷನ್ ಫ್ಲಡ್-೨ ಭಾಗದಲ್ಲಿ ಬರುವ ಕಡೆ ವ್ಯವಸ್ಥೆ ಇದೆ. ಹೊಸ ಕರ್ನಾಟಕದಲ್ಲಿ ಸ್ವಲ್ಪ ತೊಂದರೆಯಾಗಿರಬಹುದು. ಅಲ್ಲೂ ಕೂಡ ಡಾಕ್ಟರುಗಳನ್ನು ಕಳುಹಿಸುವ ಪ್ರಯತ್ನ ಮಾಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.— ಶ್ರೀ ಬಿ. ರಾಮದಾಸಾರವರ ಚುಕ್ಕೆ ಪ್ರಶ್ನೆ ೧೮೪ (೭೪೧)

ಸದಸ್ಯರು ಗೈರು ಹಾಜರಿ.

ಶ್ರೀಮತಿ ಮುಕ್ತ ರುನ್ನೀಸಾರವರ ಚುಕ್ಕೆ ಪ್ರಶ್ನೆ ೧೮೫ (೫೭೬)

ಸದಸ್ಯರು ಗೈರು ಹಾಜರಿ.

ತೆಳಗಿನ ಹಟ್ಟಿಗ್ರಾಮದಲ್ಲಿ ರೇಷ್ಮೆ ಚಾಕಿ ಕೇಂದ್ರ

೭೪೩. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಕಾಕ್ ತಾಲ್ಲೂಕಿನ ತೆಳಗಿನ ಹಟ್ಟಿಗ್ರಾಮದಲ್ಲಿ ರೇಷ್ಮೆ ಚಾಕಿ ಕೇಂದ್ರ ಸ್ಥಾಪಿಸಲಾಗುವುದೆ

ಆ) ಹಾಗಿದ್ದಲ್ಲಿ ಅದರ ಕೆಲಸ ಯಾವಾಗ ಪ್ರಾರಂಭಿಸಲಾಗುವುದು.

ಇ) ಹಾಗೂ ಅದರ ಅಂದಾಜು ವೆಚ್ಚವೆಷ್ಟು ?

ಶ್ರೀ ಕೆ. ಎಂ. ಮುನಿಯಪ್ಪ (ರೇಷ್ಮೆ ಸಚಿವರು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಎಂ. ಎಲ್. ಮುತ್ತಣ್ಣವರ್.—ಮಾನ್ಯ ಅಧ್ಯಕ್ಷರೇ, ಗೋಕಾಕ್ ತಾಲ್ಲೂಕಿನ ತೆಳಗಿನ ಹಟ್ಟಿ ಗ್ರಾಮದಲ್ಲಿ ಒಂದು ರೇಷ್ಮೆ ಚಾಕಿ ಕೇಂದ್ರವನ್ನು ತೆಗೆಯಲು ಕೇಳಿದ್ದಕ್ಕೆ ಮಾನ್ಯ ಮಂಖ್ಯಮಂತ್ರಿಗಳಿಗೆ ಹೇಳುತ್ತೇನೆಂದು ಮಾನ್ಯ ಸಚಿವರು ಜಿಲ್ಲಾ ಪ್ರವಾಸ ಮಾಡಿದಾಗ ನೋಳಿದ್ದರು. ಈ ತಾಲ್ಲೂಕಿನಲ್ಲಿ ರೇಷ್ಮೆ ಉತ್ಪಾದನೆ ಬಹಳಷ್ಟು ಇದೆ. ಆದ್ದರಿಂದ ಚಾಕಿ ಕೇಂದ್ರದ ಅವಶ್ಯಕತೆ ಇರುತ್ತದೆ. ಆದಷ್ಟು ಬೇಗ ಚಾಕಿ ಕೇಂದ್ರದ ಸ್ಥಾಪನೆ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಮಾನ್ಯ ಸಚಿವರನ್ನು ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ. ಎಂ. ಮುನಿಯಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ತಪ್ಪಾಗಿ ಕೇಳಿರುತ್ತಾರೆ. ರೇಷ್ಮೆ ಜರಿ ಮಾಡತಕ್ಕಂಥ ಸಿಲ್ಕ್ ಫಿಲೇಚರ್ ಸ್ಥಾಪನೆ ಮಾಡುತ್ತೀರಾ ಎಂದು ಕೇಳಿದ್ದಾರೆ. ನಾನು ತೆಳಗಿನ ಹಟ್ಟಿ ಗ್ರಾಮಕ್ಕೆ ಪ್ರವಾಸ ಹೊಂದಂಥ ಸಂದರ್ಭದಲ್ಲಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆ ಮಾಡಬೇಕೆಂದು ಕೇಳಿದರು. ಈಗ ಅವರ ಪ್ರಶ್ನೆಗೆ ಉತ್ತರ ಹೇಳುವುದಾದರೂ ಇಷ್ಟೇ ಅಲ್ಲಿ ೨೦ ಎಕರೆಗಳಲ್ಲಿ ಮಾತ್ರ ಹಿಪ್ಪನೇರಳೆ ಬೆಳೆಯಂತಕ್ಕಂಥ ೩೦ ಬೆಳೆಗಾರರು ಇದ್ದಾರೆ. ಅಲ್ಲಿಂದ ೨ ಕಿಲೋಮೀಟರ್ ದೂರದಲ್ಲಿ ಮೂಡುವನ ಎಂದು ಇದೆ. ಅಲ್ಲಿ ಒಂದು ಚಾಕಿ ಕೇಂದ್ರವನ್ನು ನಡೆಸುತ್ತಿ